ದಿನಾಂಕಃ18.04.2024 ರಂದು ಪಿ.ಡಬ್ಲ್ಯೂ-2 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಸಿವಿ ಎಸ್ ವಕೀಲರಿಂದಃ</u>

ನನ್ನ ಊರು ಯಾವುದು ಎಂದರೆ ಹೊನ್ನೇನಹಳ್ಳಿ, ಕೋಲಾರ ತಾಲ್ಲೂಕು. ಸದರಿ ವಿಳಾಸವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ ಎಂದರೆ ಆವಣಿ ಹೋಬಳಿ ಎಂದು ತಿಳಿಸಿರುತ್ತೇನೆ. ಸದರಿ ಆವಣಿ ಹೋಬಳಿಯಲ್ಲಿ ಹೊನ್ನೇನಹಳ್ಳಿ ಇರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಆವಣಿ ಹೋಬಳಿ ಎಂದು ನಾನು ಹೇಳಿ ಬರೆಸಿರುತ್ತೇನೆಯೇ? ಎಂದರೆ ಇಲ್ಲ. ಪ್ರತಿವಾದಿಯ ಗಂಡ ಯಾವ ಊರಿನವರು ಎಂದರೆ ಮುಳಬಾಗಿಲುನ ಟೀಚರ್ಸ್ ಕಾಲೋನಿಯವರು. ಪ್ರತಿವಾದಿಯ ಗಂಡನ ಮನೆಗೆ ಹೋಗಿ ಬಂದಿರುತ್ತೀರಾ ಎಂದರೆ ಹೋಗಿರುತ್ತೇನೆ. ನಾನು ಪ್ರತಿವಾದಿಯ ಗಂಡನ ಮನೆಗೆ ಹೋದ ಸಮಯದಲ್ಲಿ ಪ್ರತಿವಾದಿ ಇರುವುದನ್ನು ನೋಡಿದ್ದೀರಾ ಎಂದರೆ ಇಲ್ಲ.

2. ವಾದಿ ಎಷ್ಟು ವರ್ಷಗಳಿಂದ ಪರಿಚಯ ಎಂದರೆ 5 ವರ್ಷಗಳಿಂದ. ಯಾವ ರೀತಿಯಲ್ಲಿ ಪರಿಚಯ ಆಗಿರುತ್ತಾರೆ ಎಂದರೆ ವಾದಿ ಕಂಟ್ರಾಕ್ಟ್ ಕೆಲಸ ಮಾಡುತ್ತಿದ್ದ ಕಾರಣ ನನಗೆ ಪರಿಚಯ ಆಗಿರುತ್ತಾರೆ. ನಾನು ಯಾವ ವೃತ್ತಿ ಹೊಂದಿರುತ್ತೇನೆ ಎಂದರೆ ಸುಂದರಂ ಫೈನಾನ್ಸ್ ಕಂಪನಿಯಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿರುತ್ತೇನೆ. ನಾನು ಟಿವಿಎಸ್ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿ.

3. ಯಾವ ದಿನಾಂಕ ಪ್ರತಿವಾದಿಯ ಗಂಡ ಹಣ ಕೇಳಿರುತ್ತಾರೆ ಎಂದರೆ ಜೂನ್ 2021 ದಿನಾಂಕ ಗೊತ್ತಿರುವುದಿಲ್ಲ. ಪ್ರತಿವಾದಿ ಹಣ ಕೇಳಿದ ಸಮಯದಲ್ಲಿ ನಾನು ಯಾವ ಕಾರಣಕ್ಕಾಗಿ ಸದರಿ ಸ್ಥಳದಲ್ಲಿ ಹಾಜರಿದ್ದೆ ಎಂದರೆ ನೀರಿನ ವಿಚಾರವಾಗಿ ವಾದಿಯ

ಬಳಿ ಮಾತನಾಡಲು ಹೋಗಿರುತ್ತೇನೆ. ಆ ಸಮಯದಲ್ಲಿ ಯಾರು ಯಾರು ಇದ್ದರು ಎಂದರೆ ವಾದಿಯ ಸ್ನೇಹಿತರಾದ ಶಂಕರಪ್ಪ, ನಾನು, ಪ್ರತಿವಾದಿಯ ಗಂಡ. ಆ ಸಮಯದಲ್ಲಿ ವಾದಿಯ ಮನೆಯಲ್ಲಿ ಯಾರು ಯಾರು ಇದ್ದರು ಎಂದರೆ ನಾನು ನೋಡಿರುವುದಿಲ್ಲ. ಹಾಗಾದರೆ ಸದರಿ 4 ಜನರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದರೆ ಸರಿ.

4. ಪ್ರತಿವಾದಿಯ ಗಂಡ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಕೊರೋನಾದಿಂದ ಮರಣ ಹೊಂದಿರುತ್ತಾರೆ. ದಿನಾಂಕ ಗೊತ್ತಿರುವುದಿಲ್ಲ. ಪ್ರತಿವಾದಿಯ ಗಂಡನನ್ನು ಯಾವಾಗ ಕೊನೆಯ ಬಾರಿ ನೋಡಿರುತ್ತೀರಾ ಎಂದರೆ ಜೂನ್ 2021 ರಲ್ಲಿ. ದಿಃ 20.05.2021 ರಂದು ಪ್ರತಿವಾದಿಯ ಗಂಡ ಮರಣ ಹೊಂದಿರುತ್ತಾರೆ ಎಂದರೆ ದಿನಾಂಕ ಗೊತ್ತಿರುವುದಿಲ್ಲ. 2021 ರ ಮೇ ತಿಂಗಳಿನಲ್ಲಿ ಪ್ರತಿವಾದಿಯ ಗಂಡ ಮರಣ ಹೊಂದಿರುವ ಕಾರಣ ಜೂನ್ ತಿಂಗಳಿನಲ್ಲಿ ನಾನು ಅವರನ್ನು ನೋಡಿರುವುದಿಲ್ಲ ಮತ್ತುವ್ತ ವಾದಿಯ ಬಳಿ ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

5. ಪ್ರತಿವಾದಿ ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಪ್ರತಿವಾದಿ ಪರಿಚಯ ಇರುವುದಿಲ್ಲ ಎಂದರೆ ಸರಿ . ವಾದಿ ನನ್ನ ಸ್ನೇಹಿತರಾಗಿರುವ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು